ಹೊಮ್ಮಿಸಬಲ್ಲದು ಅಂತ ಯೋಚಿಸಿ ಬಳಸಬೇಕಾಗುತ್ತದೆ. ಅನುವಾದ ಮಾಡಿದ ಮೇಲೆ ಮನಸಲ್ಲೊಮ್ಮೆ, ಜೋರಾಗಿ ಒಮ್ಮೆ ಓದಿ ನೋಡಿ ಯಾವುದು ಸೂಕ್ತ ಅನ್ನಿಸುತ್ತೋ ಅದನ್ನೇ ಉಳಿಸಿಕೊಳ್ಳುವೆ. ಮೂಲ ಭಾಷೆಯಿಂದ ಮತ್ತೊಂದು ಭಾಷೆಯಲ್ಲಿ ಆ ಕೃತಿಗೆ ಹೊಸತೊಂದು ಜನ್ಮ ಕೊಡುವುದು ಹುಡುಗಾಟವಲ್ಲ. ಕೃತಿ ಮೊದಲು ನಮ್ಮೊಳಗೆ ಇಳಿಯಬೇಕು. ಆಮೇಲೆ ಅನುವಾದಕ್ಕೆ ತೊಡಗಬೇಕು. ಅನುವಾದಿಸಿದ್ದನ್ನು ಮತ್ತೆ ಮತ್ತೆ ಓದಿ ಭಾವವನ್ನು ಸರಿಯಾಗಿ ದಾಟಿಸಿದ್ದೇವೆಯೇ ಅಂತ ನೋಡಬೇಕು.

ಯಾವ ಅನುವಾದವೂ ಪರಿಪೂರ್ಣವಲ್ಲ. ಆದರೆ, ಅನುವಾದವನ್ನು ಓದಿದಾಗ ಅದೇ ಮೂಲ ಪಠ್ಯವೇನೋ ಅನ್ನಿಸಬೇಕು. ಅದರಲ್ಲಿ ಸವಾಲುಗಳಿವೆ. ಎರಡು ಭಿನ್ನ ಭಾಷೆಗಳನ್ನು ಹೇಗೆ ಹೊಂದಿಸುತ್ತಿರಿ ಎನ್ನುವುದು ಸವಾಲು. ಎರಡಕ್ಕೂ ನ್ಯಾಯ ಸಲ್ಲಿಸಬೇಕಾಗುತ್ತದೆ.

'ಕಾನೂರು ಹೆಗ್ಗಡಿತಿ', 'ಚಿಕವೀರ ರಾಜೇಂದ್ರ', 'ಮರಳಿ ಮಣ್ಣಿಗೆ' ಇವನ್ನೆಲ್ಲ ಒಟ್ಟಾಗಿ ಅನುವಾದಿಸುವಾಗ ಇಬ್ಬರೂ ಅಧ್ಯಾಯಗಳನ್ನು ಹಂಚಿಕೊಳ್ಳುತ್ತಿದ್ದೆವು. ಪ್ರತಿಯೊಂದು ಅಧ್ಯಾಯದ ಅನುವಾದದ ಅನಂತರ ಪರಸ್ಪರ ಚರ್ಚಿಸಿ ಅನುವಾದ ಸರಿಯಾಗಿ ಬಂದಿದೆಯಾ, ಏನಾದರೂ ತಿದ್ದಬೇಕೆ ಅಂತ ನೋಡುತ್ತಿದ್ದೆವು. 'ಈ ವಾಕ್ಯ ಬದಲಿಸಬೇಕೆ? ಇದರ ಬದಲು ಇದನ್ನು ಹಾಕಿದರೆ ಹೇಗೆ?' ಅಂತೆಲ್ಲ ಚರ್ಚೆ ಮಾಡುತ್ತ ಅನುವಾದಿಸಿದೆವು. ಅದೊಂದು ತರಹ 'ಕೋ ಕೋ' ಅಂದರೆ co operative, co ordinationನಂತಿತ್ತು. ಅನುವಾದವೂ ನಮ್ಮ ದಾಂಪತ್ಯದ ಭಾಗವೇ ಆಗಿತ್ತು. ಸಂಸಾರದಲ್ಲಿ ಒಬ್ಬರಿಗೊಬ್ಬರು supportive ಆಗಿ ನಡೆದಂತೆ ಇದರಲ್ಲೂ ನಡೆದೆವು.

ಕಳೆದ ಆ ಎಲ್ಲ ದಿನಗಳನ್ನು ನೋಡಿದಾಗ...

**Those were the days my friend**
**We thought they'd never end**
**We'd sing and dance forever and a day**
**We'd live the life we choose**
**We'd fight and never lose**
**Those were the days, oh yes those were the days**

ಇಂಗ್ಲಿಷ್ ಹಾಡು ನೆನಪಾಗುತ್ತಿದೆ.


**ಹೇಮಾ ಎಸ್.**

ಕನ್ನಡದಲ್ಲಿ ಎಂ.ಎ. ಹಾಗೂ ಪಿಎಚ್.ಡಿ. ಪದವೀಧರೆ. ಕನ್ನಡ ಉಪನ್ಯಾಸಕಿಯಾಗಿ ಕೆಲಸ ಮಾಡಿದ್ದಾರೆ. ಆಕಾಶವಾಣಿಯಲ್ಲಿ ಕೆಲವು ಕಾಲ ಉದ್ಘೋಷಕಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಇಂಗ್ಲಿಷ್ ಹಾಗೂ ಹಿಂದಿಯಿಂದ ಲೇಖನ, ಕತೆ ಹಾಗೂ ಕವನಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಪ್ರಕಟಿತ ಕೃತಿಗಳು: 'ಹೆಸರಿಲ್ಲದ ಹೂ' (ಅಬ್ಬಾಸ್ ಕಿರಸ್ತೊಮಿ ಕವನಗಳ ಅನುವಾದ) ಮತ್ತು 'ಉರಿವ ಬನದ ಕೋಗಿಲೆಗಳು' (ಅನುವಾದಿತ ಲೇಖನಗಳ ಸಂಗ್ರಹ). ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.